ಓ.ಎಸ್. ನಂ. 52/2019

ಪಿ.ಡಬ್ಲ್ಯೂ: 01 (Ramesh)

ದಿನಾಂಕ: 08-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಶ್ರೀ ಎಸ್ ಎಂ 3 ನೆ ಪ್ರತಿವಾದಿ ಪರ ವಕೀಲರಿಂದ.**

ಈ ದಾವೆಯನ್ನು ಪಾಲುವಿಭಾಗಕ್ಕಾಗಿ ಸಲ್ಲಿಸಿದ್ದೇನೆ. ನನ್ನ ತಂದೆ 2024 ರಲ್ಲಿ ಮೃತಪಟ್ಟಿದ್ದಾರೆ. ಅವರು ಮೃತಪಡುವವರೆಗೂ ಅವರು ನಮ್ಮೊಂದಿಗೆ ಇದ್ದರು ಎಂದರೆ ನಾನು ಕೆಲಸದ ಮೇಲೆ ಬೇರೆ ಊರಿನಲ್ಲಿ ಇದ್ದೆನು. ನಾನು 1998 ರಿಂದ ಜೆಸ್ಕಾಂನಲ್ಲಿ ಕೆಲಸ ಮಾಡುತ್ತಿದ್ದೇನೆ. ಕೆಲಸ ಸಿಗುವ ಮೊದಲು ನಾವು ಹುಲಿಕೆರೆ ಗ್ರಾಮದಲ್ಲಿದ್ದು , ಆಗ ನಾನು ವಿಧ್ಯಾಭ್ಯಾಸ ಮಾಡುತ್ತಿದ್ದೆ. ನನ್ನ ತಾತನ ಹೆಸರು ಚೆನ್ನಬಸಪ್ಪ. ಅವರಿಗೆ 6 ಜನ ಮಕ್ಕಳಿರುತ್ತಾರೆ. ಅವರುಗಳ ಹೆಸರು ಮೃತ ದೊಡ್ಡಶರಣಪ್ಪ, ನನ್ನ ತಂದೆಯಾದ ಮೃತ ಸಣ್ಣಶರಣಪ್ಪ, ಶರಣಪ್ಪ, ಮೃತ ಯರ್ರಪ್ಪ, ಮೃತ ವೆಂಕಟಮ್ಮ ಮತ್ತು ಮೃತ ಲಕ್ಷ್ಮಮ್ಮ. ಮೇಲೆ ಹೇಳಿದ ಎಲ್ಲಾ ವ್ಯಕ್ತಿಗಳಿಗೂ ಮಕ್ಕಳಿದ್ದಾರೆ.

ನನ್ನ ತಂದೆಯಾದ ಮೃತ ಸಣ್ಣಶರಣಪ್ಪನಿಗೆ 6 ಜನ ಮಕ್ಕಳು. ದೊಡ್ಡಕ್ಕ, ಸಣ್ಣಚೆನ್ನಬಸಪ್ಪ, ಲೋಕಮ್ಮ, ಗಂಗಮ್ಮ, ನಾಗಮ್ಮ ಮತ್ತು ನಾನು. ದೊಡ್ಡಶರಣಪ್ಪನಿಗೆ 3 ಮಕ್ಕಳು. ಮಾರುತಿ, ಚೆನ್ನಬಸಪ್ಪ ಮತ್ತು ಲಲಿತಮ್ಮ. ಅವರೆಲ್ಲಾ ಈಗ ಜೀವಂತಾ ಇದ್ದಾರೆ.

**ಪಾಟೀ ಸವಾಲು: ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.